ಬಾಯಿಯಿಂದ ಉಸಿರು ಬಿಡುತ್ತಾ 'ನಾನು ಕುಡ್ದಿವ್ನೇನ್ಲಾ' ಎನ್ನಲು ಚಂದ್ರು 'ಸುಮ್ಕಿರಪ್ಪ ಎಷ್ಟು ದಿನಾಂತ ಇದೇ ಗೋಳಾಡ್ತಿ' ಎಂದ. ಸಾರಾಯಿ ಬಾಟ್ಲಿ ಮುಚ್ಚಳ ತೆಗೆದು ಒಂದೇ ಸಮನೆ ಗಟಗಟನೆ ಕುಡಿದು ಸಪ್ಪೆ ಬಾಡಿನ ಸೂಪನ್ನು ಸೊರಕ್ ಅಂತ ಎಳಕಂಡ ಮಲ್ಲಣ್ಣ 'ನನ್ನ ಗೋಳನ್ನೇ ನಿಂಗೆ ಸಹಿಸಕ್ಕಾಯ್ತಿಲ್ಲ ಅಂದ ಮ್ಯಾಕೆ ನಿಮ್ಮವ್ವ ಪಟ್ಟ ಗೋಳನ್ನ ಅದೆಂಗ್ಲಾ ಸಹಿಸ್ಕಂಡಿದಿಯಾ' ಎಂದ. ಚಂದ್ರು ಮಲ್ಲಣ್ಣನ ಮಾತಿಗೆ ಮರುಮಾತಾಡದೆ ಅಡುಗೆ ಮನೆ ಸೇರಿದ. ಹಿಟ್ಟಿನೆಸರು ಬೆಂದು ಸದ್ದು ನಿಲ್ಲಿಸಿತ್ತು. ಅದನ್ನು ಕೆಳಗಿಳಿಸಿ ಹಿಟ್ಟಿನ ಕೋಲಿನಿಂದ ತಿರುವುತ್ತಾ ಕುಂತಾ. ಮುದ್ದೆ ಒಂದೊಂದಾಗಿ ತಣಿಗೆಗೆ ಬಿದ್ದವು. ಅವು ಮಲ್ಲಣ್ಣನ ಮುಂದೆ ಬರುವಷ್ಟರಲ್ಲಿ ಅವನು ಚಿತ್ತಾಗಿ ಹೋಗಿದ್ದ.

ಅನ್ನವನ್ನ ಬಾಡಿನೆಸರಲ್ಲಿ ಚೆನ್ನಾಗಿ ಕಲಸಿ ನೀರಿನಂತೆ ಮಾಡಿಕೊಂಡ ಚಂದ್ರು ಹಾಸಿಗೆ ಮೇಲೆ ಮಲಗಿದ್ದ ನೀಲವ್ವನ್ನ ತೊಡೆ ಮೇಲೆ ಎಳಕೊಂಡು ಒಂದೊಂದೇ ತುತ್ತು ತಿನ್ನಿಸುತ್ತಾ ಹೋದ. ಇತ್ತ ಚಿತ್ತಾಗಿ ರಾಂಗಾಗಿದ್ದ ಮಲ್ಲಣ್ಣ 'ಇನ್ನೆಷ್ಟು ದಿನ ಹಿಂಗೇ ತಿನಿಸ್ತೀಲಾ, ಒಂದೇ ಒಂದು ಸತಿ ನಿಮ್ಮವ್ವನ ಬಾಯಿ ಬಿಡ್ಸಲೇ. ದ್ರೌಪದಿ ಜಡೆ ಬಿಟ್ಟಂಗೆ ಬಿಡಕ್ಕೇಳ್ಲಾ' ಎನ್ನುತ್ತಿದ್ದಂತೆ ಪಕ್ಕದ ಮನೆಯ ಕರಿಯಣ್ಣ ಮನೆಗೆ ಹಾಜರಾದ. 'ಏನ್ಲಾ ಒತಾರೆನೆ ಸುರುಹಚ್ಕಂಡಿದ್ದಿ... ಅದೆಷ್ಟು ಕುಡಿತಿ ಬುಡೋ ಮಲ್ಲಣ್ಣ. ಕುಡುದ್ ತಕ್ಷಣ ಆಗಿರಾದೆಲ್ಲ ಒಂಟೋಯ್ತುದಾ' ಎಂದವನೇ ಲೋಟ ಹಿಡಿದುಕೊಳ್ಳಲು ಮರೆಯಲಿಲ್ಲ. 'ಮರೆಯಕ್ಕೆ ಜಾತ್ರೆಲಿ ಮಿಠಾಯಿ ಕಳಕ್ಕಂಡಿದ್ದೀವೇನು' ಮಲ್ಲಣ್ಣನ ಮಾತು ಇನ್ನೂ ಸ್ಪಷ್ಟವಾಗಿತ್ತು. ಕರಿಯಪ್ಪ 'ಇನ್ನೆಷ್ಟು ದಿನ ಕೊರಗ್ತಿ ಮತ್ತೆ' ಎಂದು ಗುಟುಕೇರಿಸಿ ಬಾಯಿಗೆ ಬಾಡಿನ ತುಂಡಿರಿಸಿ ಸಿಗಿದು 'ಬಾಳ ಚಂದಾಕ್ ಮಾಡಿದಿಯೋ ಚಂದ್ರ' ಎಂದನು. ಚಂದ್ರು ನೀಲವ್ವನಿಗೆ ಉಣಿಸುತ್ತಾ, ಬಟ್ಟೆಯಿಂದ ಬಾಯಿ ಒರೆಸುವಲ್ಲಿ ಮಗ್ನನಾಗಿದ್ದ. ಉತ್ತರ ಬರದಿದ್ದನ್ನು ಕಂಡು ಸುಮ್ಮನಾಗದ ಕರಿಯಣ್ಣ 'ನಿನ್ನಂತ ಮಗನ್ನ ಪಡಿಯಕ್ಕೆ ನೀಲವ್ವ ಪುಣ್ಯ ಮಾಡಿದ್ಲು ಬುಡು. ಅವಳ ಋಣಾನ ಈ ಜಲ್ಮದಲ್ಲೇ ತೀರಿಸಿಬುಟ್ಟೆ ನೀನು' ಎಂದು ಮತ್ತೊಂದು ಲೋಟ ಏರಿಸಿ ಮರುಮಾತಾಡದೇ ಎದ್ದು ಹೋಗುತ್ತಿರಲು ಅವನನ್ನು ಕೈಹಿಡಿದು ಕೂರಿಸಿಕೊಂಡ ಮಲ್ಲಣ್ಣ 'ಈಟೊತ್ತು ನನ್ನುಚ್ಚೆ ಕುಡ್ದು ಈಗ ಎದ್ದೋದ್ರೆ ಎಂಗ್ಲಾ ಕರಿ ಬಡ್ಡಿಮಗನೆ' ಎಂದವನೇ ಮೇಲೆದ್ದು ಚಂದ್ರನ ಮುಖವನ್ನು ತನ್ನೆರಡು ಕೈಗಳಿಂದ ಸವರಿ 'ನನ್ನ ಮಗ ಅಪರಂಜಿ ಕಲಾ ಅಪರಂಜಿ. ಆದ್ರೆ ಒಳಗೆ ಧಮ್ ಇಲ್ಲ. ಮಾಡೋ ಕೆಲಸ ಬುಟ್ಟು ಶಂಡನಂಗೆ ಅಡುಗೆಮನೆ ಸೇರ್ಕಂಡವ್ನೆ' ಎಂದೊಡನೇ ಪಿತ್ತ ನೆತ್ತಿಗೇರಿಸಿಕೊಂಡ ಚಂದ್ರು 'ಮುಚ್ಚಪ್ಪ ಬಾಯ... ಈಟ್ ದಿನಾ ನಿನ್ನಂಗೆ ಕುಡ್ಕಂಡು ಬಿದ್ದಿದ್ರೆ ಅವ್ವ ಇವತ್ತು ಹಿಂಗೂ ಬದಿಕ್ಕಂತಿರಲಿಲ್ಲ. ತೋಟದಾಗೆ ತಿಕ ಬಗ್ಗಿಸಿ ಕ್ಯಾಮೆ ಮಾಡಿದ್ದಕ್ಕೆ ಇವತ್ತು ಹಿಂಗಾರ ಅವ್ಳೆ. ಒಂದ್ರುಪಾಯಿ ಕೈಚಾಚದೆ ಅವಳನ್ನ ಉಳಿಸ್ಕಂಡಿವ್ನಿ. ಇವತ್ತು ಪ್ರಾಣದಿಂದವ್ಳಲ್ಲ ಅಷ್ಟೇ ಸಾಕು. ಇನ್ನು' ಮಾತು ಮುಗಿದಿರಲಿಲ್ಲ ನೀಲವ್ವ ಮೈಕೊಡವಿದಂತಾಯ್ತು, ಹಲ್ಕಚ್ಚಿ ಬಾಯಿ ಬಿಗಿ ಹಿಡಿದಿದ್ದನ್ನು ಗಮನಿಸಿದ ಚಂದ್ರು 'ಇದ್ಯಾಕವ್ವ ಒಸಿ ತಕಾ... ಇನ್ನೊಸಿ ತಿನ್ನವ್ವಾ' ಎಂದ. ನೀಲವ್ವ ಬಾಯಿ ಬಿಡಲಿಲ್ಲ. 'ಇನ್ನೊಂಕಿತಾ ಇದರ ಬಗ್ಗೆ ಮಾತಾಡಕ್ಕಿಲ್ಲ ಕಣವ್ವಾ. ಈ ಅಪ್ಪನೇ ಸುಮ್ಕಿದ್ರು ಕೆಣಕ್ಕಂದು ಪ್ರಾಣ ತಿಂತನೆ. ನೀನ್ ತಿನ್ನವ್ವ ತಿನ್ನು' ಎನ್ನುತ್ತಾ ನೀಲವ್ವನಿಗೆ ತುತ್ತಿರಿಸಲು ಸುರುವಿಟ್ಟನು. ನೀಲವ್ವನೂ ಸಹ ಎದೆ ಕಚ್ಚಿದ ಮಗುವಿನಂತಾದಳು. ಚಂದ್ರುವಿನ ಮೈಯೆಲ್ಲಾ ಬೆವರಿ ನೀರಾಗಿತ್ತು. ಕಣ್ಣು ಕೆಂಪಾಗಿ ನೀರು ತುಂಬಿತ್ತು. ಕರಿಯಪ್ಪ ಮೆತ್ತಗೆ ಜಾಗ ಖಾಲಿ ಮಾಡಿದನು. ಮಲ್ಲಣ್ಣ ಅರ್ಧಂಬರ್ಧ ತಿಂದು ಹಾಗೆಯೇ ನೆಲಕ್ಕುರುಳಿ ತೊದಲುತ್ತಾ, ಕನವರಿಸುತ್ತಾ ಹಲ್ಲು ಕಡಿಯುತ್ತಿದ್ದನು. ಒಂದು ತುತ್ತೂ ತಿನ್ನದೆ ನೀಲವ್ವನನ್ನು ಮಲಗಿಸಿ ತೋಟದ ಕಡೆ ನಡೆದ ಚಂದ್ರು ಅಂಗಿ ಕಳಚಿಟ್ಟು ಮೈಮೇಲೆ ದೆವ್ವ